# <u>ಕರ್ನಾಟಕ ವಿಧಾನ ಪರಿಷತ್ತು</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1082 (1165 +1161)
2. ಸದಸ್ಯರ ಹೆಸರು : ಶ್ರೀ ಸಿ.ಟಿ ರವಿ ಹಾಗೂ ಶ್ರೀ ಟಿ.ಎನ್ ಜವರಾಯಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.12.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಎತ್ತಿನಹೊಳೆ ಯೋಜನೆ ಆರಂಭವಾಗಿದ್ದು, ಯಾವಾಗ; ಎಷ್ಟು ಹಂತಗಳಲ್ಲಿ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿತ್ತು; ಪ್ರಸ್ತುತ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಯೋಜನೆಯ ಸಮಗ್ರ ಮಾಹಿತಿ ನೀಡುವುದು; | ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | ಯೋಜನೆಯ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ಯೋಜನಾ ವೆಚ್ಚದಲ್ಲಿ ಆಗಿರುವ ಹೆಚ್ಚಳ ಎಷ್ಟು; ಈವರೆಗೆ ವೆಚ್ಚ ಮಾಡಿರುವ ಹಣ ಎಷ್ಟು; ನಿರ್ವಹಿಸಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳಿಗೆ ಆಗಿರುವ ವೆಚ್ಚ ಎಷ್ಟು; (ಕಾಮಗಾರಿವಾರು ವಿವರ ನೀಡುವುದು) | ಈ ಯೋಜನೆಯ ಮೂಲ ಅಂದಾಜು ಮೊತ್ತವು ರೂ.8323.50 ಕೋಟಿಗಳಾಗಿದ್ದು (2011-12 ದರಪಟ್ಟಿ), ಈ ಮೊತ್ತವನ್ನು ರೂ.12,912.36 ಕೋಟಿ (2012-13 ದರಪಟ್ಟಿ) ಮೊತ್ತಕ್ಕೆ ಪರಿಷ್ಕರಿಸಿದ್ದು, ನಂತರ ರೂ.23,251.66 ಕೋಟಿ ಮೊತ್ತಕ್ಕೆ (2018-19 ದರಪಟ್ಟಿ) ಪುನರ್ ಪರಿಷ್ಕರಿಸಲಾಗಿದ್ದು, ದಿನಾಂಕ:10.01.2023 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಗಾಗಿ ಈವರೆಗೆ ರೂ.16,556.18 ಕೋಟಿಗಳ ಮೊತ್ತದ ಸಂಚಿತ ವೆಚ್ಚವಾಗಿದ್ದು, ಕಾಮಗಾರಿವಾರು ವೆಚ್ಚದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ) | ಈ ಯೋಜನೆಯಿಂದ ಎಷ್ಟು ಜಿಲ್ಲೆಗಳು ಮತ್ತು ತಾಲ್ಲೂಕುಗಳಿಗೆ ಅನುಕೂಲವಾಗಲಿದೆ ಅವು ಯಾವುವು; ಯಾವ ಯಾವ ಜಿಲ್ಲೆಗಳಿಗೆ/ತಾಲ್ಲೂಕುಗಳಿಗೆ/ಗ್ರಾಮಗಳಿಗೆ/ಎಷ್ಟೆಷ್ಟು ಪ್ರಮಾಣದ ನೀರನ್ನು ಹರಿಸಲಾಗುವುದು; | ಈ ಯೋಜನೆಯಿಂದ ರಾಜ್ಯದ ಬರಪೀಡಿತ 07 ಜಿಲ್ಲೆಗಳ 29 ತಾಲ್ಲೂಕುಗಳಿಗೆ ಅನುಕೂಲವಾಗಲಿದ್ದು, ಸದರಿ ವಿವರಗಳನ್ನು ಒಳಗೊಂಡಂತೆ ಜಿಲ್ಲೆ/ತಾಲ್ಲೂಕುಗಳಿಗೆ ಹಂಚಿಕೆಯಾಗಿರುವ ನೀರಿನ ವಿವರಗಳನ್ನು ಪ್ರತ್ಯೇಕವಾಗಿ **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |
| ಈ) | ಯೋಜನೆ ಉದ್ಘಾಟನೆ ನಂತರ ಎಷ್ಟು ಹಳ್ಳಿಯ ಜನರಿಗೆ ಕುಡಿಯುವ ನೀರು ಪೂರೈಸಲಾಗಿದೆ; ಎಷ್ಟು ಕೆರೆಗಳನ್ನು ತುಂಬಿಸಲಾಗಿದೆ; (ಜಿಲ್ಲಾವಾರು ಕೆರೆಗಳ ಹೆಸರು ಸಹಿತ ವಿವರ ನೀಡುವುದು) | ಈ ಯೋಜನೆಯ ಹಂತ-1ರ ಏತ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ದಿನಾಂಕ: 06.09.2024 ರಂದು ಪ್ರಾಯೋಗಿಕವಾಗಿ ಚಾಲನೆಗೊಳಿಸಿ, ವಾಣಿ ವಿಲಾಸ ಸಾಗರಕ್ಕೆ ವೇದಾ ವ್ಯಾಲಿಯ ಮುಖಾಂತರ ತಾತ್ಕಾಲಿಕವಾಗಿ ನೀರನ್ನು ಹರಿಸಲಾಗಿದ್ದು, ಮಾರ್ಗ ಮಧ್ಯದಲ್ಲಿನ ಬೇಲೂರು ತಾಲ್ಲೂಕಿನ ಹಳೆಬೀಡು ಕೆರೆ, ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆ ಮತ್ತು ಕಡೂರು ತಾಲ್ಲೂಕು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ದೇವನೂರು ಕೆರೆಗಳನ್ನೊಳಗೊಂಡಂತೆ ಒಟ್ಟು 8 ಕೆರೆಗಳನ್ನು ತುಂಬಿಸಲಾಗಿದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಮುಂದುವರೆದು, ಈ ಯೋಜನೆಯಿಂದ ಕುಡಿಯುವ ನೀರಿನ ಸಲುವಾಗಿ ಹಾಗೂ ಕೆರೆ ತುಂಬಿಸಲು ಹಂಚಿಕೆಯಾಗಿರುವ ನೀರನ್ನು Bulk supply ಮಾಡಲು ಮಾತ್ರ ಯೋಜಿಸಿದ್ದು, ತೂಬುಗಳನ್ನು (outlet) ಸಂಬಂಧಿಸಿದ ಇಲಾಖೆಗಳೊಂದಿಗೆ (End users) ಜಂಟಿ ಪರಿವೀಕ್ಷಣೆ ನಂತರ ಗುರುತಿಸಿ ನಿರ್ಮಿಸಲಾಗುವುದು. ತದನಂತರ ತೂಬುಗಳ ಸ್ಥಳದಿಂದ End users ಗಳಿಗೆ ಸಂಬಂಧಿಸಿದ ಇಲಾಖೆಯಿಂದ ಕೆರೆಗಳಿಗೆ ನೀರನ್ನು ತುಂಬಿಸಲು ಕ್ರಮವಹಿಸಲಾಗುವುದು. |
| ಉ) | ಈ ಯೋಜನೆಗೆ ನೀರಿನ ಲಭ್ಯತೆ ಕುರಿತು ನಡೆಸಿದ್ದ ಅಧ್ಯಯನ ವರದಿಯ ಪ್ರತಿ ನೀಡುವುದು; ಅಧ್ಯಯನ ವರದಿಯಲ್ಲಿ ತಪ್ಪಾಗಿದ್ದು, ಎತ್ತಿನಹೊಳೆ ಯೋಜನೆ ಅವೈಜ್ಞಾನಿಕವೆಂದು ಕೇಂದ್ರೀಯ ಜಲ ಆಯೋಗ ಪತ್ರ ಬರೆದಿರುವುದು ನಿಜವೇ;(ಪತ್ರದ ಪ್ರತಿ ನೀಡುವುದು) ಈ ಕುರಿತು ಸರ್ಕಾರದ ವಾದವೇನು? | ಈ ಯೋಜನೆಯ ನೀರಿನ ಲಭ್ಯತೆಯ ಅಧ್ಯಯನದ ವರದಿಯ ಪ್ರತಿಯನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ.<br><br>ಸದರಿ ಯೋಜನಾ ವರದಿಯನ್ನು ತಯಾರಿಸುವ ಸಂದರ್ಭದಲ್ಲಿ, ಯೋಜನೆಯಲ್ಲಿ ಪರಿಗಣಿಸಿರುವ ಇಳುವರಿಗೆ ಸಂಬಂಧಿಸಿದಂತೆ ಪ್ರೊ. ರಾಮಪ್ರಸಾದ, IISc. (Ret.) ಮತ್ತು ಕೇಂದ್ರ ಜಲ ಆಯೋಗ (CWC), National Institute of Hydrology & Karnataka State Natural Disaster Monitoring Centre ಸಂಸ್ಥೆಗಳಿಂದ ಅಭಿಪ್ರಾಯವನ್ನು ಸಹ ಪಡೆಯಲಾಗಿದೆ.<br><br>ಯೋಜನೆಯು ಅವೈಜ್ಞಾನಿಕವೆಂದು ಕೇಂದ್ರ ಜಲ ಆಯೋಗದಿಂದ ಯಾವುದೇ ಪತ್ರ ಸ್ವೀಕೃತವಾಗಿರುವುದಿಲ್ಲ. |
| ಊ) | ಈ ಯೋಜನೆಗೆ ಕೇಂದ್ರ ಅರಣ್ಯ ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಕರಾರು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತಕರಾರು ವ್ಯಕ್ತಪಡಿಸಲು ಕಾರಣವೇನು; ತಕರಾರಿಗೆ ನೀಡಿರುವ ಸ್ಪಷ್ಟನೆ ಹಾಗೂ ಹೆಚ್ಚುವರಿ ಮಾಹಿತಿಗಳೇನು; (ರಾಜ್ಯ ಸರ್ಕಾರದಿಂದ ಬರೆದಿರುವ ಪತ್ರದ ಪ್ರತಿ ನೀಡುವುದು) | • ಈ ಯೋಜನೆಯ ಹಂತ-2ರಡಿ ಕಾಲುವೆಯು ಒಟ್ಟು 508ಎ - 01ಗು (ಹಾಸನ:422ಎ -35ಗು ಹಾಗೂ ತುಮಕೂರು:85ಎ-6ಗು) ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುತ್ತಿದೆ.<br><br>• ಸದರಿ ಅರಣ್ಯ ಪ್ರದೇಶಕ್ಕೆ ಅರಣ್ಯ ಇಲಾಖೆಯಿಂದ Compensatory afforestation land ಅತ್ಯವಶ್ಯಕವಾಗಿದ್ದು, ನಿಗಮದಲ್ಲಿ ಲಭ್ಯವಿರುವ 71ಎ-06ಗು ಹೊರತುಪಡಿಸಿ 436ಎ-35ಗು ಸರ್ಕಾರಿ ಜಮೀನು ಅತ್ಯವಶ್ಯವಿರುತ್ತದೆ.<br><br>• ಪ್ರಸ್ತುತ, ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 65ಎ ದನಗಳ ಮಫತ್ತು ಜಮೀನನ್ನು ಅರಣ್ಯ ಇಲಾಖೆಗೆ ಜಿಲ್ಲಾಧಿಕಾರಿಗಳಿಂದ ದಿ:30.09.2024 ರ ಪತ್ರದಲ್ಲಿ ಕಾಯ್ದಿರಿಸಲಾಗಿದೆ.<br><br>• ಹಾಸನ ಜಿಲ್ಲೆ ಅರಸೀಕೆರೆ ಹಾಗೂ ಬೇಲೂರು ತಾಲ್ಲೂಕಿನಲ್ಲಿ ಒಟ್ಟು 373 ಎಕರೆ ಸರ್ಕಾರಿ ಜಮೀನುಗಳನ್ನು ಪರ್ಯಾಯವಾಗಿ ಹಾಗೂ ಪರಿಹಾರಾತ್ಮಕವಾಗಿ ಅರಣ್ಯೀಕರಣಕ್ಕೆ ಹಾಸನ ಜಿಲ್ಲಾಧಿಕಾರಿಗಳಿಂದ ದಿ:25.07.2024 ರ ಪತ್ರದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ವಿವರಗಳನ್ನು ದಿನಾಂಕ:19.08.2024 ರಂದು ಪರಿವೇಶ್ ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | • ಕಾಯ್ದಿರಿಸಲಾದ 373 ಎ ಸರ್ಕಾರಿ ಜಮೀನುಗಳ ಪೈಕಿ 31 ಎ ಜಮೀನು Compensatory afforestation land ಗೆ ಸೂಕ್ತವಾಗಿಲ್ಲದ ಕಾರಣ ಜಿಲ್ಲಾಧಿಕಾರಿಗಳು ಪುನ: 34ಎ ಜಮೀನನ್ನು ಪರಿಹಾರಾತ್ಮಕವಾಗಿ ಅರಣ್ಯೀಕರಣಕ್ಕೆ ಕಾಯ್ದಿರಿಸಿ ದಿ:20.11.2024 ರ ಪತ್ರದಲ್ಲಿ ಆದೇಶಿಸಿದ್ದು, ಪ್ರಸ್ತುತ ಏಕೀಕೃತ ಅರಣ್ಯ ತೀರುವಳಿ ಪ್ರಸ್ತಾವನೆಯನ್ನು ಪರಿವೇಶ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿ Stage-1 ತೀರುವಳಿ ಪಡೆಯಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. |
| ಋ) | ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಅರಣ್ಯ ತೀರುವಳಿ, ರಾಷ್ಟ್ರೀಯ ಹೆದ್ದಾರಿ ಅನುಮತಿ, ರೈಲ್ವೇ ಇಲಾಖೆಯ ಅನುಮತಿ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ ಇತ್ಯಾದಿ ಅಡೆತಡೆಗಳನ್ನು ನಿವಾರಿಸಿಕೊಂಡು ಯೋಜನೆಯನ್ನು ಮಾರ್ಚ್-2027 ರ ಅಂತ್ಯಕ್ಕೆ ಅನುದಾನದ ಲಭ್ಯತೆ ಮೇರೆಗೆ ಸಂಪೂರ್ಣವಾಗಿ ಪೂರ್ಣಗೊಳಿಸಲು ಯೋಜಿಸಲಾಗಿರುತ್ತದೆ. |

**ಸಂಖ್ಯೆ: ಜಸಂಇ 110 ಡಬ್ಲ್ಯೂಎಲ್ಎ 2024**

**( ಡಿ. ಕೆ. ಶಿವಕುಮಾರ್ )**
**ಉಪ ಮುಖ್ಯಮಂತ್ರಿಗಳು**